# ಬೆಂಗಳೂರು ಪೂರ್ವ ನಗರ ಪಾಲಿಕೆ

ಆಯುಕ್ತರ ಕಚೇರಿ, ವಾಣಿಜ್ಯ ಸಂಕೀರ್ಣ, ಆರ್‌ಎಚ್‌ಬಿ ಕಾಲೋನಿ,
ಫಿಯೋನಿಕ್ಸ್ ಮಾಲ್ ಎದುರು, ಮಹದೇವಪುರ ಬೆಂಗಳೂರು –48

**ಸಂಖ್ಯೆ: ಅ.ಆ(ಕಂ)/ಪಿಆರ್/12/2026–27** **ದಿನಾಂಕ: 22–04–2026**

## ರಾಷ್ಟ್ರೀಯ ಜನಗಣತಿ–2027ರ ಗಣತಿದಾರರಾಗಿ ಕಾರ್ಯನಿರ್ವಹಿಸಲು ನೇರ ಸಂದರ್ಶನಕ್ಕೆ ಆಹ್ವಾನ

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಜನಗಣತಿ–2027ರ ಮೊದಲನೇ ಹಂತದ ಕಾರ್ಯವಾದ ಮನೆ ಪಟ್ಟಿ ಮತ್ತು ಮನೆ ಗಣತಿ ಕಾರ್ಯ ಹಾಗೂ ಫೆಬ್ರವರಿ 2027ರಲ್ಲಿನ 2ನೇ ಹಂತದ ಜನಗಣತಿ ಕಾರ್ಯವನ್ನು ಪರಿಣಾಮಕಾರಿಯಾಗಿ ಹಾಗೂ ಕಾಲಮಿತಿಯಲ್ಲಿ ಪೂರ್ಣಗೊಳಿಸುವ ಉದ್ದೇಶ ಹೊಂದಿದ್ದು, ರಾಷ್ಟ್ರೀಯ ಮಹತ್ವದ ಈ ಕಾರ್ಯ ನಿರ್ವಹಿಸುವ ಮೂಲಕ ರಾಷ್ಟ್ರದ ಅಭಿವೃದ್ಧಿ ಕಾರ್ಯಕ್ಕೆ ಕೈಜೋಡಿಸುವ ಸಲುವಾಗಿ ಗಣತಿ ಕಾರ್ಯ ನಿರ್ವಹಿಸಲು ಆಸಕ್ತ ವಿದ್ಯಾರ್ಥಿಗಳು,ಸ್ವಯಂ ಸೇವಕರು, ಪುರುಷರು ಹಾಗೂ ಮಹಿಳೆಯರು ನೇರ ಸಂದರ್ಶನಕ್ಕೆ ಹಾಜರಾಗುವಂತೆ ತಿಳಿಸಿದೆ.

**ಆಯ್ಕೆಗೆ ಪರಿಗಣಿಸಲಿರುವ ಗಣತಿದಾರರ ಸಂಖ್ಯೆ, ವಿದ್ಯಾರ್ಹತೆ, ಗೌರವ ಧನ, ಹಾಗೂ ಇನ್ನಿತರೆ ವಿವರ :**

1. ವಿದ್ಯಾರ್ಹತೆ: ದ್ವಿತೀಯ ಪಿ.ಯು.ಸಿ. ಹಾಗೂ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿರಬೇಕು
2. ಆಂಡ್ರಾಯ್ಡ್ 12.0 ತಂತ್ರಾಂಶದೊಂದಿಗೆ 4 ಜಿಬಿ ರ್ಯಾಮ್ ಸಾಮರ್ಥ್ಯದ ಸ್ವಂತ ಮೊಬೈಲ್ ಹೊಂದಿರಬೇಕು.
3. **ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಮಹದೇವಪುರ, ಕೆ.ಆರ್.ಪುರ ವಿಧಾನಸಭಾ ಕ್ಷೇತ್ರಗಳ ನಿವಾಸಿಗಳಿಗೆ ಹಾಗೂ ಸುತ್ತಮುತ್ತಲಿನ ನಿವಾಸಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.**
4. ಮೊದಲ ಹಂತದ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು ದಿನಾಂಕ: 15–05–2026 ವರೆಗೆ ನಡೆಯಲಿದ್ದು, ಅಲ್ಲಿಯವರೆಗೆ ರಜಾ ದಿನವೂ ಸೇರಿದಂತೆ ನಿರಂತರವಾಗಿ ಕಾರ್ಯನಿರ್ವಹಿಸಲು ಬದ್ಧರಾಗಿರಬೇಕು.
5. ಭಾರತದ ಜನಗಣತಿ–2027ರ ಜನಗಣತಿ ಮಾರ್ಗಸೂಚಿಯನ್ವಯ ದಿನಾಂಕ: 15–05–2026 ವರೆಗಿನ ಮೊದಲ ಹಂತದ ಗಣತಿ ಕಾರ್ಯಕ್ಕೆ ರೂ.9,000/– (ರೂ. ಒಂಭತ್ತು ಸಾವಿರ ಮಾತ್ರ) ಗೌರವಧನ ನೀಡಲಾಗುವುದು (ಕನಿಷ್ಠ 150–200 ಮನೆಗಳಿಗೆ)
6. ಭಾರತದ ಜನಗಣತಿ–2027ರ 2ನೇ ಹಂತದ ಕಾರ್ಯವು ಫೆಬ್ರವರಿ–2027 ರ ಮಾಹೆಯಲ್ಲಿ ನಡೆಯಲಿದ್ದು, ಸದರಿ ಕಾರ್ಯಕ್ಕೆ ರೂ.16,000/– (ರೂ. ಹದಿನಾರು ಸಾವಿರ ಮಾತ್ರ) ಗೌರವಧನ ನೀಡಲಾಗುವುದು.(150–200 ಮನೆಗಳಿಗೆ ಅಥವಾ 750 ರಿಂದ 800 ಜನಸಂಖ್ಯೆಗೆ)
7. ಈ ಆಯ್ಕೆಯು ಭಾರತದ ಜನಗಣತಿ–2027ರ ಗಣತಿ ಕಾರ್ಯ ನಿರ್ವಹಣೆಗೆ ಮಾತ್ರ ಸೀಮಿತವಾಗಿರುತ್ತದೆ.
8. ಆಯ್ಕೆಯಾದವರಿಗೆ ಕಾರ್ಯ ನಿರ್ವಹಣೆ ಅನುಕೂಲವಾಗಲು ಜನಗಣತಿ ಮೊಬೈಲ್ ಅಪ್ಲಿಕೇಷನ್ ನಲ್ಲಿ ಮಾಹಿತಿ ಪಡೆಯುವ ಹಾಗೂ ಗಣತಿ ಕಾರ್ಯನಿರ್ವಹಣೆ ಬಗ್ಗೆ ಮಾಸ್ಟರ್ ಟ್ರೈನರ್ ಗಳಿಂದ ಅಗತ್ಯ ತರಬೇತಿ ನೀಡಲಾಗುವುದು
9. **ಆಯ್ಕೆ ಮಾಡಿಕೊಳ್ಳುವ ಗಣತಿದಾರರ ಸಂಖ್ಯೆ: 1,000 ಗಣತಿದಾರರು**
10. ನೇಮಕಾತಿ ಮಾಡಿಕೊಳ್ಳುವುದು ಪೂರ್ವ ನಗರ ಪಾಲಿಕೆ ಮಾನ್ಯ ಆಯುಕ್ತರ ವಿವೇಚನೆಗೆ ಒಳಪಟ್ಟಿರುತ್ತದೆ.

**ನೇರ ಸಂದರ್ಶನ ದಿನಾಂಕ, ಸಮಯ ಮತ್ತು ಸ್ಥಳ :**

**ದಿನಾಂಕ: 24–04–2026 ರಂದು (ಶುಕ್ರವಾರ) ಸಮಯ: ಬೆಳಿಗ್ಗೆ 10.00 ಗಂಟೆಗೆ**

**ಸ್ಥಳ: ನ್ಯೂ ಹಾರಿಜನ್ ಕಾಲೇಜ್ ಆಫ್ ಇಂಜಿನಿಯರಿಂಗ್, ಹೊರವರ್ತುಲ ರಸ್ತೆ, ಮಾರತಹಳ್ಳಿ ಹತ್ತಿರ, ಕಾಡುಬೀಸನಹಳ್ಳಿ ಬೆಂಗಳೂರು–560103.**

**ಲೊಕೇಶನ್: https://maps.app.goo.gl/qEUBkfYeWu7iAFaF6?g_st=ac**

ಸಹಿ/–

ಆಯುಕ್ತರು, ಬೆಂಗಳೂರು ಪೂರ್ವ ನಗರ ಪಾಲಿಕೆ